ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: ____________

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 24/2/2021

# ಒಂದು ದೇಶ-ಒಂದು ಚುನಾವಣೆ

# ಪರಿಷತ್‌ನಲ್ಲಿ ಚರ್ಚೆ ಇಲ್ಲ

- ಮಾ.4ರಿಂದಲೇ ಪರಿಷತ್ ಕಲಾಪ ಆರಂಭ
- ಕಲಾಪದಲ್ಲಿ ಪ್ರಶ್ನೋತ್ತರ, ಇತರ ವಿಷಯ ಚರ್ಚೆ
- ಪರಿಷತ್‌ನಲ್ಲಿ ಮೊಬೈಲ್ ನಿಷೇಧ
- ಮಾಧ್ಯಮಗಳಿಗೆ ಮುಕ್ತ ಪ್ರವೇಶ

ಸಂ.ಕ.ಸಮಾಚಾರ ಬೆಂಗಳೂರು 24/2/21

ವಿಧಾನ ಪರಿಷತ್‌ನಲ್ಲಿ ಮಾರ್ಚ್ 4ರಿಂದ ಆರಂಭವಾಗುವ ಅಧಿವೇಶನದಲ್ಲಿ ಒಂದು ದೇಶ-ಒಂದು ಚುನಾವಣೆ ವಿಷಯದ ಕುರಿತಂತೆ ಚರ್ಚಿಸುವ ಯಾವುದೇ ಪ್ರಸ್ತಾವ ಸರ್ಕಾರದಿಂದ ಬಂದಿಲ್ಲ. ಹೀಗಾಗಿ ಎಂದಿನಂತೆ ಪ್ರಶ್ನೋತ್ತರ ಹಾಗೂ ಮತ್ತಿತರ ಕಲಾಪಗಳು ಅಧಿವೇಶನದಲ್ಲಿ ನಡೆಯಲಿವೆ ಎಂದು ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದ್ದಾರೆ.



ವಿಧಾನಸೌಧದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಷತ್‌ನಲ್ಲಿ ಇನ್ನು ಮುಂದೆ ಯಾವುದೇ ಸದಸ್ಯರು ಮೊಬೈಲ್ ಫೋನ್‌ಗಳನ್ನು ತರಲು ಅವಕಾಶ ನೀಡುವುದಿಲ್ಲ. ಸದನದ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿಗಳು ಮೊಬೈಲ್ ತರುವುದನ್ನು ನಿಷೇಧಿಸಲಾಗಿದೆ. ಮಾಧ್ಯಮಗಳು ಸ್ವಯಂ ನಿಯಂತ್ರಣ ಹೇರಿಕೊಂಡು ಕೆಲಸ ಮಾಡುವ ಅಗತ್ಯವಿದೆ. ರಾಜ್ಯದ ಜನತೆಯ ಹಿತದೃಷ್ಟಿಯಿಂದ ಪರಿಷತ್‌ನಲ್ಲಿ ಮಾಧ್ಯಮಗಳ ಪ್ರವೇಶವನ್ನು ನಿರ್ಬಂಧಿಸುವುದಿಲ್ಲ. ಮಾಧ್ಯಮಗಳು ಕೂಡ ಜವಾಬ್ದಾರಿಯಿಂದ ವರ್ತಿಸಬೇಕೆಂಬುದಷ್ಟೇ ನನ್ನ ಕಳಕಳಿ ಎಂದು ಹೇಳಿದರು.

ವಿಧಾನ ಪರಿಷತ್‌ನ ಕುಸಿಯುತ್ತಿರುವ ಘನತೆಯನ್ನು ಮರುಸ್ಥಾಪಿಸುವ ದೃಷ್ಟಿಯಿಂದ ಈಗಾಗಲೇ ಎಲ್ಲ ಸದಸ್ಯರಿಗೆ ವೈಯಕ್ತಿಕವಾಗಿ ಪತ್ರ ಬರೆದು ಕೆಲವು ಅಭಿಪ್ರಾಯಗಳನ್ನು ಹಂಚಿಕೊಂಡಿದ್ದೇನೆ. ಅದಕ್ಕೆ ಪ್ರತಿಯಾಗಿ ಅವರಿಂದಲೂ ಸಲಹೆ ಕೋರಿದ್ದೇನೆ. ಒಟ್ಟಾರೆ ಪರಿಷತ್ ಕಲಾಪಕ್ಕೆ ನೈಜ ಅರ್ಥ ಬರುವಂತೆ ನಡೆದುಕೊಳ್ಳಬೇಕೆಂಬುದಷ್ಟೇ ನನ್ನ ಉದ್ದೇಶ ಎಂದು ಹೇಳಿದರು.

ಯಾವುದೇ ಜಾತಿ-ಜನಾಂಗಕ್ಕೆ ಮೀಸಲಾತಿ ನೀಡುವುದಾದರೆ ಆರ್ಥಿಕ ಸ್ಥಿತಿ-ಗತಿಯೇ ಮಾನದಂಡವಾಗಬೇಕು. ಅಂದಾಗ ಮಾತ್ರ ಮೀಸಲಾತಿಯ ಉದ್ದೇಶ ಈಡೇರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯದಲ್ಲಿ ಹಲವಾರು ಮಠಾಧೀಶರು, ರಾಜಕಾರಣಿಗಳು, ವಿವಿಧ ಸಮಾಜಗಳ ಮುಖಂಡರು ಮೀಸಲಾತಿಗಾಗಿ ಹೋರಾಟ ನಡೆಸಿದ್ದಾರೆ. ಮಠಾಧೀಶರ ಹೋರಾಟದ ಕುರಿತಂತೆ ಮಾತನಾಡುವುದಿಲ್ಲ. ಸರ್ಕಾರ ಆಯಾ ಸಮುದಾಯದ ಆರ್ಥಿಕಮಟ್ಟದ ಆಧಾರದ ಮೇಲೆ ಮೀಸಲಾತಿ ನೀಡಬೇಕು ಎಂದು ಸಲಹೆ ಮಾಡಿದರು.

ರಾಜ್ಯದಲ್ಲಿ ಸರಿಸುಮಾರು 1.36 ಕೋಟಿ ಜನರು ಬಡತನ ರೇಖೆಗಿಂತ ಕೆಳಗಿರುವುದಾಗಿ ಬಿಪಿಎಲ್ ರೇಷನ್ ಕಾರ್ಡ್ ಪಡೆದಿದ್ದಾರೆ. ಆದರೆ ಇವರಲ್ಲಿ ನಿಜವಾದ ಬಡವರು ಎಷ್ಟೆಂಬುದು ಯಾರಿಗೂ ಗೊತ್ತಿಲ್ಲ. ಸತ್ಯಾಸತ್ಯತೆಯ ಪರಾಮರ್ಶೆ ನಡೆಸಿ ನೈಜ ಬಡವರಿಗೆ ಸೌಲಭ್ಯಗಳು ಸಿಗುವಂತಾಗಬೇಕು ಎಂದರು.

ಜೆಡಿಎಸ್‌ನ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವುದಾಗಿ ಪ್ರಕಟಿಸಿದ ಸಭಾಪತಿ ಹೊರಟ್ಟಿ, ಸಂವಿಧಾನಿಕ ಹುದ್ದೆಯಲ್ಲಿ ಇರುವುದರಿಂದ ಒಂದು ಪಕ್ಷದ ಸದಸ್ಯತ್ವ ಹೊಂದುವುದು ನೈತಿಕವಾಗಿ ಸರಿಯಲ್ಲ. ಹಿಂದೆ ಡಿ.ಎಚ್.ಶಂಕರಮೂರ್ತಿ ಅವರು ಬಿಜೆಪಿಗೆ ರಾಜೀನಾಮೆ ನೀಡಿರಲಿಲ್ಲ. ಆದರೆ ಸ್ಪೀಕರ್ ಆಗಿದ್ದಾಗ ಕೆ.ಆರ್.ರಮೇಶ್ ಕುಮಾರ್ ಕಾಂಗ್ರೆಸ್ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ಹೀಗಾಗಿ ನಾನೂ ಕೂಡ ಸಭಾಪತಿ ಹುದ್ದೆಯಲ್ಲಿ ಇರುವ ತನಕ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿದ್ದೇನೆ ಎಂದು ವಿವರಿಸಿದರು.